ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು 25ನೇ ಆಗಸ್ಟು 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸ್ರ 1887ನೇ ಇಸವಿ ಅಕ್ಟೋಬರ್ ಗುರ್ತೇ ಲಾಗಾಯಿತು 1888ನೇ ಇಸವಿ ಜೂ 15ನೇ ತಾರೀಖುವರಿಗೆ ಸುಮಾರು 200 ಯಕರೆ ಜಂಗಲೀಯನ್ನು ಕ್ಲಿಯರ್‌ಮಾಡಿಸಿ 18, ಅಂಗುಲ ಲಾಂಬಿ 18, ಅಂಗುಲ ರುಂದೀ 18, ಅಂಗುಲ ಮಟ್ಟುವಾದ (200000) ಯರಡು ಲಕ್ಷ ಗುಣಿಗಳನ್ನು ತೆಗಿಯತಕ್ಕ ಬಗ್ಗೆ ಈ ತಾರೀಖು ಲಾಗಾಯಿತು (1887ನೇ ಇಸವಿ) ಅಕ್ಟೋಬರ್ 15ನೇ ತಾರೀಖುವರಿಗೆ ಟೆಂಡರುಗಳು ಅಂಗೀಕರಿಸಲ್ಪಡುತದೆ.

ಕ್ಲಿಯರ್‌ಮಾಡತಕ್ಕ ಸ್ಥಳ.	ಯಕರೆ.	ಗುಣಿಗಳ ಸಂಖೆ.
ಲಕ್ಕವಳ್ಳೀ ತರೀಕೆರೇ ತಾಲ್ಲೂಕು	50	50000
ಸಕ್ರೇಬೈಲ್ ಶಿವಮೊಗ್ಗಾ ತಾಲ್ಲೂಕು	50	50000
ಅನಿಪೆನಕಟ್ಟೆ . ಡಿಟೋ	25	25000
ಕಾಳೇನಹಳ್ಳಿ ಷಿಕಾರೀಪುರ	25	25000
ತಿಡ್ಡಿಹಳ್ಳಿ ಸೊರಬದ ತಾಲ್ಲೂಕು	50	50000
	200	200000.

2. ಟೆಂಡರುಗಳು ಕ್ಲಿಯರ್‌ಮಾಡಲಿಕ್ಕೂ ಗುಣೀ ತೆಗಿಸುವದಕ್ಕೂ ಬೇರೆಬೇರೆಯಾಗಿ ದರ ನಮೂದ್ ಮಾಡಬೇಕು. ಕ್ಲಿಯರ್ ಮಾಡಲಿಕ್ಕೆ ಯಾಗಲೀ ಯಾ ಗುಣಿಗಳನ್ನ ತೆಗಿಯಲಿಕ್ಕೆ ಆಗಲಿ ಅಥವಾ ಯರಡಕ್ಕೂ ವಟ್ಟಿಗೆ ಯಾಗಲಿ ಟೆಂಡರ್ ಕೊಡಬಹುದು.

3. ಕ್ಲಿಯರ್ ಮಾಡುವದರಲ್ಲಿ ಮರಗಳು ಸೊಸಿಗಳು, ಬಿದರು ಟೆಂಡ್ಲುಗಳು, ನೆಲದಿಂದ 2 ಅಡೀ ವಳಗೆ ಕಡಿಯತಕ್ಕದ್ದು, ನಾಟಾ ಮತ್ತು ಬೆಲಗಿಗೆ ಲಾಯಖಾದಂಥಾ ಮರ ಮತ್ತು ಸೊಸಿಗಳು, ಮತ್ತು ಉಪಯೋಗವಾದಂಥಾ ಬಿದರುಗಳು ರೆಂಪೆ ಮುಳ್ಳು ವಗೈರೆಗಳನ್ನು ಕಡದು ಅಲ್ಲೇ ಬಿಡತಕ್ಕದ್ದು. ರೆಂಪೆಗಳು ಮತ್ತು ಮುಳ್ಳುಗಳು ವಗೈರೇ ಕಚರಾ ರಾಶಿಗಳಾಗಿ ವಟ್ಟ ಸುಡತಕ್ಕದ್ದು, ಕ್ಲಿಯರ್‌ಮಾಡಿದ್ದ ಜಾಗಾವು 1888ನೇ ಇಸವಿ ಏಪ್ರೆಲ್ ತಾರೀಖು 30ರ ವಳಗಾಗಿ ಗುಣೀ ತೆಗಿಯಲಿಕ್ಕೆ ಸಿದ್ಧವಾಗಿರಬೇಕು. ಗುಣೀ ತೆಗಿಯುವ ಕೆಲಸವು ಜೂ 30ನೇ ತಾರೀಖಿನ ವಳಗಾಗಿ ಮುಗಿಯತಕ್ಕದ್ದು.

4. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ಮುಚ್ಚಳಿಕೇ ಷರ್ತುಗಳಿಗೆ ಅನುಸರಿಸಿ ನಡಿಯುವ ಹಾಗೆ ದರಖಾಸ್ತು ಅಂಗೀಕರಿಸಲ್ಪಟ್ಟ ತಾರೀಖು ಲಾಗಾಯಿತು 3 ದಿವಸದ ವಳಗಾಗಿ (100) ನೂರು ರೂಪಾಯಿ ತೇವಣೀ ಇಡತಕ್ಕದ್ದು.

5. ಸ್ರ 1887ನೇ ಇಸವಿ ಡಿಸಂಬರ್ ಆಖೈರ್ ವಳಗಾಗಿ ಕ್ಲಿಯರ್‌ಮಾಡುವ ಕೆಲಸವೂ 1888ನೇ ಇಸವಿ ಮೇ ಆಖೈರುವಳಗಾಗಿ ಗುಣೀ ತೆಗಿಯುವ ಕೆಲಸವೂ ತಕ್ಕ ಅಭಿವೃದ್ಧೀಯಲ್ಲಿ ಇಲ್ಲದಿದ್ದ ಪಕ್ಷಕ್ಕೆ ಕಂಟ್ರಾಕ್ಟು ರದ್ದು ಮಾಡಲಿಕ್ಕೆ ಅಸಿಸ್ಟೆಂಟ್ ಕ್ವಸರ್‌ವೇಟರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ, ಮತ್ತು ತೇವಣೀ ಯಿಟ್ಟ ಮೊಬಲಗು ಸರ್ಕಾರಕ್ಕೆ ಶೇರಿಸಲ್ಪಡತಕ್ಕದ್ದು.

6. ಈ ನೋಟಿಫಿಕೇಷನ್ನಲ್ಲಿ ನಮೂದ್ ಮಾಡಿದ ತಾರೀಖು ವಳಗೆ ಕ್ಲಿಯರ್ ಮತ್ತು ಗುಣೀ ತೆಗಿಯುವ ಕೆಲಸವು ಸಂಪೂರ್ಣವಾಗಿ ಪೂರೈಸದಿದ್ದ ಪಕ್ಷಕ್ಕೆ ಕೆಲಸ ಮಾಡಿದ್ದ ಭಾಗಕ್ಕೆ ಕಂಟ್ರಾಕ್ಟುದಾರನಿಗೆ ಸರಕಾರದಿಂದ ಏನೇನೂ ಸಲ್ಲತಕ್ಕದ್ದಿಲ್ಲವು. ಮತ್ತು ತೇವಣೀ ಇಟ್ಟ ಮೊಬಲಗಿನ ಹಕ್ಕು ತಪ್ಪಿಹೋಗುವದು.

7. ಟೆಂಡರ್‌ಗಳನ್ನು ಶಿವಮೊಗ್ಗಾ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕ್ವಸರ್‌ವೇಟರವರ ಆಫೀಸಿಗೆ ಕಳುಹಿಸಬೇಕು. ಯಾವ ಟೆಂಡರನ್ನಾಗಲಿ ಕಾರಣವನ್ನ ತೋರಿಸದೇ ಮಂಜೂರ್ಮಾಡದೇ ಇರಲಿಕ್ಕೆ ಅಸಿಸ್ಟೆಂಟ್ ಕ್ವಸರ್‌ವೇಟರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ.

8. ಇದರ ಸಿವಾಯಿ ಯಿನ್ನೇನಾದರೂ ಸಂಗತೀ ತಿಳಕೊಳ್ಳತಕ್ಕದ್ದಿದ್ದರೆ ಶಿವಮೊಗ್ಗಾ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕ್ವಸರ್‌ವೇಟರ್ ಸಾಹೇಬರವರಲ್ಲಿ ತಿಳಕೊಳ್ಳಬಹುದು.

ಯಿ. ಪಿ. ಲೌರಿ,
ಅಸಿಸ್ಟೆಂಟ್ ಕ್ವಸರ್‌ವೇಟರ್ ಆಫ್ ಫಾರೆಸ್ಟ್ಸ್.